<u>ದಿನಾಂಕಃ 16-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>
<u>ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ಪ್ರಶ್ನೆಃ ನಾನು ಈ ಪಿರ್ಯಾದಿನಲ್ಲಿ ಪಕ್ಷಗಾರಳಾಗಿ ಹಾಜರಾದ ನಂತರ ನನ್ನ ವಿಚಾರಣೆಯನ್ನು ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತೇನೆಯೇ?

ಉತ್ತರಃ ಇಲ್ಲ.

ನನ್ನ ಗಂಡ ಬದುಕಿದ್ದಾಗ ಚಂದ್ರಶೇಖರ್ ರವರ ವಿರುದ್ಧ ಅವರು ದೂರನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಚಂದ್ರಶೇಖರ್ ರವರ ವಿರುದ್ಧ ನನ್ನ ಗಂಡ ಹಣಕಾಸಿನ ಸಂಬಂಧ ಸಲ್ಲಿಸಿದ್ದ ದೂರಿನ ಬಾಬ್ತು ಆರೋಪಿಯು ಚಂದ್ರಶೇಖರ್ ರವರ ಪರವಾಗಿ ಎಸ್.ಪಿ ಕಛೇರಿಗೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಎಸ್.ಪಿ ರವರು ಏಕಪಕ್ಷೀಯವಾಗಿ ಆರೋಪಿಯ ಚೆಕ್ ಅನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಪರಸ್ಪರ ಒಪ್ಪಿಗೆಯಿಂದಲೇ ಚೆಕ್ ಅನ್ನು ನಾವು ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯು ಚಂದ್ರಶೇಖರ್ ರವರ ಪರವಾಗಿ ಬಂದ ಕಾರಣ ಅವರನ್ನು ಬೆದರಿಸಿ ಚೆಕ್ ಅನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಎಷ್ಟು ನೋಟೀಸ್ ಅನ್ನು ನೀಡಲಾಗಿರುತ್ತದೆ ಎಂದು ನಾನು ನನ್ನ ವಕೀಲರನ್ನು ವಿಚಾರಿಸಿರುವುದಿಲ್ಲ.

ಸಿಂಧೂರ್ ಗೌಡರವರ ಪರಿಚಯ ನನಗೆ ಇರುವುದಿಲ್ಲ. ನನ್ನ ಗಂಡನಿಗೆ ಸದರಿಯವರಿಗೆ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಎಸ್.ಪಿ ಕಛೇರಿಗೆ ನೀಡಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇ

ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಮನೆಯಲ್ಲಿ ಇದ್ದಲ್ಲಿ ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ. ದಯಾಕರ್ ರವರಿಗೆ ಪ್ರಕರಣದ ಸಂಪೂರ್ಣ ಮಾಹಿತಿ ಇರುತ್ತದೆ. ಆರೋಪಿಯ ಮೈಸೂರಿನ ವಿಳಾಸಕ್ಕೆ ನೋಟೀಸ್ ತಲುಪದೇ ಇದ್ದ ಬಗ್ಗೆ ಅಲ್ಲಿನ ಎಸ್.ಪಿ ಕಛೇರಿಯಲ್ಲಿ ನನ್ನ ಗಂಡ ವಿಚಾರಿಸಿರಬಹುದು, ಆದರೆ, ನನಗೆ ಗೊತ್ತಿಲ್ಲ. ನನ್ನ ಅಣ್ಣ ಆರೋಪಿಯ ಮನೆಗೆ ಹೋಗಿದ್ದು ಆದರೆ ಆರೋಪಿಯು ಮನೆಯನ್ನು ಖಾಲಿ ಮಾಡಿ ಹೋಗಿದ್ದರು. ಆರೋಪಿಯ ಮಾವನ ಬಳಿಯಿಂದ ಆರೋಪಿಯ ಹಾಗೂ ಚಂದ್ರಶೇಖರ್ ರವರ ವಿಳಾಸವನ್ನು ಕೇಳಿ ತಿಳಿಯಲು ಪ್ರಯತ್ನಪಟ್ಟಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನೂ ಕೂಡಾ ಆರೋಪಿಯ ವಿಳಾಸದ ಬಗ್ಗೆ ತಿಳಿಯಲು ಪ್ರಯತ್ನಪಟ್ಟಿರುವುದಿಲ್ಲ. ಆದರೆ, ಪೊಲೀಸರ ಮೂಲಕ ಫೋನ್ ಮಾಡಿಸಿರುತ್ತೇನೆ. ಆರೋಪಿಯು ನಮ್ಮ ಮನೆಗೆ ಬಂದು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ ಎಂದು ಹೇಳಿ ನಮ್ಮಿಂದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಮಗೆ ಹಿಂದಿನಿಂದಲೂ ಪರಿಚಯವಿದ್ದು ನಮ್ಮ ಫ್ಯಾಮಿಲಿ ಫ್ರೆಂಡ್ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಮೊದಲಬಾರಿ ನಾವು ಎಸ್.ಪಿ ಕಛೇರಿಯಲ್ಲಿ ನೋಡಿದ್ದನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ.

ನಾನು, ನನ್ನ ಗಂಡ ಹಾಗೂ ನನ್ನ ಅಣ್ಣ ಹಾಗೂ ಎಸ್.ಪಿ ಅಣ್ಣಾಮಲೈರವರು ಸೇರಿ ಆರೋಪಿಯನ್ನು ಬ್ಲಾಕ್ ಮೈಲ್ ಮಾಡಿ ಚೆಕ್

ಅನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ತಾನು ರಾಜೀ ಸಂಧಾನಕ್ಕೆ ಬಂದಿದ್ದಾಗಿಯೂ ಹಾಗೂ ತಾನು ಹಣವನ್ನು ಪಡೆದಿಲ್ಲವೆಂದು ಹೇಳಿದರೂ ಕೂಡಾ ಎಸ್.ಪಿ ರವರು ಆರೋಪಿಯ ಮಾತನ್ನು ಕೇಳದೆ ದಾಖಲಾತಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಬೇರೆಯವರಿಗೆ ಹಣ ಕೊಡುವಷ್ಟು ಶಕ್ತಿ ನಮ್ಮಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಂದ್ರಶೇಖರ್ ರವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಂದ್ರಶೇಖರ್ ರವರು ಶೇರು ವ್ಯವಹಾರಕ್ಕೆ ಸಂಬಂಧಪಟ್ಟು ನನ್ನ ಗಂಡನಿಂದ ಕಮೀಷನ್ ಅನ್ನು ಪಡೆದಿದ್ದು ಅದನ್ನು ವಾಪಾಸ್ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಶೇರು ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಾವು ಅಕ್ರಮವಾಗಿ ತೆಗೆದುಕೊಂಡ ಚೆಕ್ ಅನ್ನು ವಾಪಾಸ್ ಮಾಡುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಚೆಕ್ ಅನ್ನು ಪಡೆದುಕೊಂಡ ನಂತರ ನಾವು ಆರೋಪಿಯನ್ನು ಭೇಟಿಯಾಗಿಲ್ಲ ಎಂದರೆ ಸಾಕ್ಷಿದಾರರು ನಾವು ಭೇಟಿಯಾಗಿರುವುದಿಲ್ಲ ಎಂದು ನುಡಿಯುತಾರೆ. ನಂತರ ನಾವು ಆರೋಪಿಯ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಒಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿದಾರರು ನಾವು ಒಂದು ನಿಜ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಗಂಡನ ಸಾವಿಗೆ ಆರೋಪಿಯೇ ಕಾರಣ ಎಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸಾಕ್ಷಿದಾರರು ನಿಜವಾದ ಪ್ರಕರಣದ ಬಗ್ಗೆ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡ Income Tax returns file

ಮಾಡುತ್ತಿದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ದಯಾಕರ್ ರವರನ್ನು ಸಾಕ್ಷಿ ವಿಚಾರಣೆ ಮಾಡಿಸಬಹುದೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಅವರ ಫೋನ್ ನಂಬರ್ ಇಲ್ಲದೇ ಇರುವ ಕಾರಣ ಕಷ್ಟವಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ನಮ್ಮಿಂದ ಯಾವುದೇ ಹಣವನ್ನು ಪಡೆಯದೇ ಇದ್ದ ಕಾರಣ ನಮಗೆ ಅವರು ಹಣವನ್ನು ನೀಡಲು ಭಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಪೊಲೀಸ್ ಆಗಿದ್ದ ಕಾರಣ ಪೊಲೀಸರು ಭದ್ರತೆಗಾಗಿ ಪಡೆದಿದ್ದ ಚೆಕ್ಕುಗಳೇ ಹೊರತು ಆರೋಪಿಯು ಯಾವುದೇ ಹಣವನ್ನು ನಮ್ಮಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾವು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಎಸ್.ಪಿ ಅಣ್ಣಾಮಲೈ ರವರ ಒತ್ತಡದಿಂದ ಈ ಎಲ್ಲಾ ಪ್ರಕ್ರಿಯೆಗಳು ಆಗಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

C.C.No.67/2021
PW-2